## ಗಣ್ಯರಿಗೆ ಸದನದಲ್ಲಿ ಸಂತಾಪ

**ಬೆಂಗಳೂರು:** ಮಾಜಿ ಸಚಿವರಾದ ಸುಷ್ಮಾ ಸ್ವರಾಜ್, ಅರುಣ್ ಜೇಟ್ಲಿ, ಹಿರಿಯ ವಕೀಲ ರಾಮ್ ಜೇಠ್ಮಲಾನಿ ಸೇರಿದಂತೆ ಅಗಲಿದ ಗಣ್ಯರಿಗೆ ವಿಧಾನ ಮಂಡಲದ ಉಭಯ ಸದನದಲ್ಲಿ ಗುರುವಾರ ಸಂತಾಪ ಸೂಚಿಸಲಾಗಿದೆ. ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಮಂಡಿಸಿದ ನಿರ್ಣಯದಲ್ಲಿ ಸುಷ್ಮಾ ಸ್ವರಾಜ್, ಅರುಣ್ ಜೇಟ್ಲಿ, ರಾಮ್ ಜೇಠ್ಮಲಾನಿ, ಮಾಜಿ ಶಾಸಕರಾದ ಉಮೇಶ್ ಭಟ್, ಸಿ.ವೀರಭದ್ರಯ್ಯ, ಅರ್ಜುನ್ ರಾವ್ ಲಕ್ಷ್ಮಣ್ ರಾವ್ ಹಿಶೋಬಕರ್, ಎ.ಕೆ.ಸುಬ್ಬಯ್ಯ ಅವರಿಗೆ ಸಂತಾಪ ಸೂಚಿಸಲಾಯಿತು. ಸಿಎಂ ಯಡಿಯೂರಪ್ಪ, ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಮಾಜಿ ಸ್ಪೀಕರ್ ರಮೇಶ್ ಕುಮಾರ್, ಕಾಂಗ್ರೆಸ್‌ನ ಎಚ್.ಕೆ.ಪಾಟೀಲ್, ಆರ್.ವಿ.ದೇಶಪಾಂಡೆ, ಸಚಿವರಾದ ಬಿ.ಶ್ರೀರಾಮುಲು, ಶಶಿಕಲಾ ಜೊಲ್ಲೆ, ಶಾಸಕರಾದ ಅಭಯ ಪಾಟೀಲ್, ಎ.ಟಿ.ರಾಮಸ್ವಾಮಿ ಮೊದಲಾದವರು ಅಗಲಿದ ಗಣ್ಯರ ಬಗ್ಗೆ ಮಾತನಾಡಿದರು.

**ಮೇಲ್ಮನೆಯಲ್ಲೂ ಶ್ರದ್ಧಾಂಜಲಿ:** ವಿಧಾನ ಪರಿಷತ್ತಿನಲ್ಲೂ ಸದನ ಕಲಾಪ ಆರಂಭವಾಗುತ್ತಿದ್ದಂತೆಯೇ ಸಂತಾಪ ಸೂಚಕ ನಿರ್ಣಯದ ಮೇಲೆ ಮಾತನಾಡಿದ ಸಭಾಪತಿ ಕೆ. ಪ್ರತಾಪಚಂದ್ರಶೆಟ್ಟಿ, ''ಕರ್ನಾಟಕದ ಜತೆ ಅವಿನಾಭಾವ ಸಂಬಂಧ ಹೊಂದಿದ್ದ ಸುಷ್ಮಾ ಸ್ವರಾಜ್, ಅರುಣ್ ಜೇಟ್ಲಿ ಹಾಗೂ ರಾಮ್ ಜೇಠ್ಮಲಾನಿ ನಿಧನದಿಂದ ದೇಶಕ್ಕೆ ತುಂಬಲಾರದ ನಷ್ಟ ಉಂಟಾಗಿದೆ'' ಎಂದು ವಿಷಾದಿಸಿದರು. ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ಪ್ರತಿಪಕ್ಷ ನಾಯಕ ಎಸ್.ಆರ್. ಪಾಟೀಲ್, ''ಹಣಕಾಸು ಖಾತೆಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದ ಅರುಣ್ ಜೇಟ್ಲಿ ಅವರು ಬದುಕಿದ್ದರೆ ದೇಶದಲ್ಲಿ ಇಂದು ಆರ್ಥಿಕ ಹಿಂಜರಿತ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ'' ಎಂದರು. ಇದೇ ವೇಳೆ ನೆರೆ ಹಾವಳಿಯಿಂದ ರಾಜ್ಯದಲ್ಲಿ 90ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದು, ಅವರ ನಿಧನಕ್ಕೂ ಸಂತಾಪ ಸೂಚಿಸುವಂತೆ ಕಾಂಗ್ರೆಸ್ ಸದಸ್ಯ ಪ್ರಕಾಶ್ ರಾಥೋಡ್ ಒತ್ತಾಯಿಸಿದರು. ಅದಕ್ಕೆ ಸದನವೂ ಸಮ್ಮತಿ ಸೂಚಿಸಿತು.

## ಕಾಂಗ್ರೆಸ್ ಸಭೆಯಲ್ಲಿ ಆರ್‌ಎಸ್‌ಎಸ್ ವಿರುದ್ಧ ರಮೇಶ್‌ಕುಮಾರ್ ಕಿಡಿ

**ಬೆಂಗಳೂರು:** ಆರ್‌ಎಸ್‌ಎಸ್ ಸೇರಿದಂತೆ ಸಂವಿಧಾನೇತರ ಶಕ್ತಿಗಳು ಪ್ರಜಾಪ್ರಭುತ್ವವನ್ನು ನಿಯಂತ್ರಿಸುತ್ತಿವೆ ಎಂದು ಮಾಜಿ



ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಕಚೇರಿಯಲ್ಲಿ ನಡೆದ ಹಿರಿಯ ಕಾಂಗ್ರೆಸ್ ನಾಯಕರ ಸಭೆಯಲ್ಲಿ ಮಾತನಾಡಿ, ''ಸದನದ ನಿಯಮ ಬದಿಗಿಟ್ಟು ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಕಲಾಪ ನಡೆಸಿದ್ದಾರೆ. ನಿಲುವಳಿ ಸೂಚನೆ ಮಂಡಿಸಿದಾಗ ಅದನ್ನು ಪರಿವರ್ತಿಸಿರುವುದಕ್ಕೆ ಹಲವಾರು ಉದಾಹರಣೆಗಳಿವೆ. ಆದರೆ ಯಾವುದೇ ಸಂವಾದಕ್ಕೂ ಅವಕಾಶ ನೀಡದೇ ಸ್ಪೀಕರ್ ಸದನದ ಹಕ್ಕನ್ನು ಕಸಿದುಕೊಂಡಿದ್ದಾರೆ,'' ಎಂದು ಆರೋಪಿಸಿದ್ದಾರೆ.

## ತುಟಿಬಿಚ್ಚದ ಸಚಿವರು

**ಬೆಂಗಳೂರು:** ವಿಧಾನಸಭೆಯಲ್ಲಿ ಗುರುವಾರ ಕಾವೇರಿದ ಚರ್ಚೆಯಲ್ಲೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಹೊರತಾಗಿ ಆಡಳಿತ ಪಕ್ಷದ ಸಾಲು



ಮುಗುಮ್ಮಾಗಿ ಉಳಿದಿದ್ದು ಗಮನ ಸೆಳೆಯಿತು. ನೆರೆ ಕುರಿತ ಚರ್ಚೆಯಲ್ಲಿ ಸಿದ್ದರಾಮಯ್ಯ ಚುಚ್ಚುಮಾತಿಗೂ ಸಿಎಂ ಯಡಿಯೂರಪ್ಪ ಸೇರಿ ಸಚಿವರು ತುಟಿಬಿಚ್ಚಲಿಲ್ಲ. ಡಿಸಿಎಂ ಕಾರಜೋಳ ಅವರನ್ನು ಸಿದ್ದರಾಮಯ್ಯ ಪದೇಪದೇ ಕೆಣಕಿದರೂ ಪ್ರತಿಕ್ರಿಯಿಸುವ ಗೋಜಿಗೆ ಹೋಗಲಿಲ್ಲ. ''ಯಾರು ಏನಾದರೂ ಮಾಡಿಕೊಳ್ಳಲಿ. ಪ್ರತಿಕ್ರಿಯೆ ಬೇಡ ಎಂದು ತೀರ್ಮಾನ ಮಾಡಿಬಿಟ್ಟಿದ್ದೀರಾ'' ಎಂದು ಕಾಂಗ್ರೆಸ್ ಸದಸ್ಯರು ಕೆಣಕುವುದನ್ನು ಮುಂದುವರಿಸಿದಾಗ ಮಾಧುಸ್ವಾಮಿ ಒಂಟಿಯಾಗಿ ತಿರುಗಿಬಿದ್ದರು. ಸಿಎಂ ಬಿಎಸ್‌ವೈಗೆ ಸರಕಾರ ನಡೆಸಲು ಹೈಕಮಾಂಡ್ ಸ್ವಾತಂತ್ರ್ಯ ನೀಡುತ್ತಿಲ್ಲ ಎಂದು ಸಿದ್ದರಾಮಯ್ಯ ಅವರು ಜರಿದರು. ಹಾಗಾದರೆ, ನಿಮ್ಮನ್ನು ಪ್ರತಿಪಕ್ಷ ನಾಯಕರಾಗಿ ಮಾಡಲು 2 ತಿಂಗಳಿಂದ ಕಸರತ್ತು ಮಾಡಿದ್ದು ಕಾಂಗ್ರೆಸ್‌ನಲ್ಲಿ ನಿಮ್ಮ ಮಹತ್ವ ತೋರಿಸುತ್ತೆ ಎಂದು ಮಾಧುಸ್ವಾಮಿ ತಿರುಗೇಟು ನೀಡಿದರು.

**ನಿನ್ನಾಟ ಮುಗಿದಿಲ್ವಾ:** ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮಾತಿಗೆ ಹಿಂಬದಿಯಿಂದ ಬೆಂಬಲ ಸೂಚಿಸಿ, ಮಧ್ಯೆಮಧ್ಯೆ ಮಾತನಾಡುತ್ತಿದ್ದ ಎಂ.ಬಿ.ಪಾಟೀಲ್ ಅವರ ವಿರುದ್ಧ ಸಚಿವ ಜೆ.ಸಿ.ಮಾಧುಸ್ವಾಮಿ ತಿರುಗಿಬಿದ್ದರು. '' ಯೂ ನಾನ್ ಸೆನ್ಸ್ ಫೆಲೋ.., ದಾದಾಗಿರಿ ಮಾಡ್ತೀಯಾ..? ನಿನ್ನ ಆಟ ಇನ್ನೂ ಮುಗಿದಿಲ್ವಾ...? ಎಂದು ಕಟುಶಬ್ದಗಳಲ್ಲಿ ನಿಂದಿಸಿದರು.

**ಸದನದಲ್ಲೂ ಧೈರ್ಯ ಪ್ರದರ್ಶಿಸಿದ ಯತ್ನಾಳ್:** ಯತ್ನಾಳ್ ಅವರನ್ನು ಉದ್ದೇಶಿಸಿ ''ಸತ್ಯ ಕಹಿಯಾಗಿರುತ್ತೆ. ನೀವು ಸತ್ಯ ಹೇಳಿದ್ದಕ್ಕೆ ನೊಟೀಸ್ ಕೊಟ್ಟಿದ್ದಾರೆ. ಯಡಿಯೂರಪ್ಪ ಅವರನ್ನು ತೆಗೆಯಲು ಕೇಂದ್ರ ಸಚಿವರು ಸಂಚು ಮಾಡುತ್ತಿದ್ದಾರೆ ಎಂಬ ನಿಮ್ಮ ಮಾತು ನಿಜ'' ಎಂದರು. ಹೌದಲ್ಲವೇ? ಎಂದು ಸಿದ್ದು ಪ್ರಶ್ನಿಸಿದಾಗ ಯತ್ನಾಳ್ ತಲೆ ಅಲ್ಲಾಡಿಸಿದರು. ಸಿಎಂ ಬಿಎಸ್‌ವೈ ಹಿಂದೆ ತಿರುಗಿ ಯತ್ನಾಳ್ ಅವರತ್ತ ನೋಡಿ ಸುಮ್ಮನಾದರು.

## ಸಿದ್ದರಾಮಯ್ಯ ಪ್ರತಿಪಕ್ಷ ನಾಯಕ

**ಬೆಂಗಳೂರು:** ಆಡಳಿತ-ಪ್ರತಿಪಕ್ಷದ ಗದ್ದಲದ ಮಧ್ಯೆಯೇ ಸಿದ್ದರಾಮಯ್ಯ ಅವರನ್ನು ಪ್ರತಿಪಕ್ಷ ನಾಯಕರಾಗಿ ನೇಮಕ ಮಾಡಿರುವ ವಿಚಾರವನ್ನು ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಕಟಿಸಿದ್ದಾರೆ.

2